ಸದಲಗಾ-ದತ್ತವಾದ ಸೇತುವೆ ನಿರ್ಮಾಣ

1755-ಶ್ರೀ ಪ್ರಕಾಶ ಬಿ. ಹುಕ್ಕೇರಿ (ಸದಲಗಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸದಲಗಾ ದತ್ತವಾದ ಗ್ರಾಮಗಳ ಮಧ್ಯ ದೂಧಗಂಗಾ ನದಿಯ ಮಧ್ಯ ಸೇತುವೆಯ ನಿರ್ಮಾಣ ಕಾಮಗಾರಿಯು ಈಗ ಯಾವ ಹಂತದಲ್ಲಿದೆ?*

ಆ) *ಈ ಕಾಮಗಾರಿಗಾಗಿ ಇದುವರೆಗೆ ಖರ್ಚಾಗಿರುವ ಮತ್ತು ಬಿಡುಗಡೆ ಮಾಡಲಾಗಿರುವ ಹಣವೆಷ್ಟು?*

ಇ) *ಈ ಕಾಮಗಾರಿಯನ್ನು ಪೂರ್ತಿಗೊಳಿಸಲು ಸರ್ಕಾರದವರು ಕೈಕೊಂಡಿರುವ ಕ್ರಮಗಳೇನು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ಸೇತುವೆಯ ಎಲ್ಲಾ ಆರು ಪೀಯರ್‌ಗಳಿಗೆ ಪಾಯಾ ಹಾಕಿ ಸರಾಸರಿ 10 ಮೀಟರ್‌ವರೆಗೆ ಎತ್ತರಿಸಲಾಗಿದೆ. ಸದಲಗಾ ಮತ್ತು ದತ್ತವಾದ ಕಡೆಯ ಎರಡು ಆಬಟ್‌ಮೆಂಟ್‌ಗಳು ಮುಕ್ತಾಯ ಹಂತದಲ್ಲಿವೆ. ಅಪ್ರೋಚ್ ಎಂಬಾಕಮೆಂಟ್ ಕೆಲಸ ಪ್ರತಿಶತ 80ರಷ್ಟು ಮುಗಿದಿದೆ.

ಆ) ಈ ಕಾಮಗಾರಿಗಾಗಿ ಇದುವರೆಗೆ ಏಪ್ರಿಲ್ 98ರವರೆಗೆ ರೂ. 91.42 ಲಕ್ಷ ಖರ್ಚಾಗಿರುತ್ತದೆ. ರೂ. 74.42 ಲಕ್ಷ ಹಣ ಭರವಸೆ ಪತ್ರ ಬಿಡುಗಡೆಯಾಗಿರುತ್ತದೆ.

ಇ) ಗುತ್ತಿಗೆ ನಿಯಮಾವಳಿಗಳ ಪ್ರಕಾರ ಕಾಮಗಾರಿ ಪೂರ್ತಿ ಗೊಳಿಸಬೇಕಾದ ದಿನಾಂಕ ಡಿಸೆಂಬರ್ 2000 ಇರುತ್ತದೆ. ನಿಗಧಿತ ಸಮಯದಲ್ಲಿ ಕಾಮಗಾರಿ ಪೂರ್ತಿ ಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ರಾಜ್ಯದ ಗ್ರಾಮಾಂತರ ಪ್ರದೇಶಗಳನ್ನು ಕುಷ್ಠಿಪಟುಗಳಿಗೆ ಜೀವನ ಭದ್ರತೆ

1757 - ಶ್ರೀ ಕೆ.ಎನ್ ಪುಟ್ಟಣ್ಣಯ್ಯ (ಪಾಂಡವಾಪುರ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಇರುವ : ಗರಡಿ ಮನೆಗಳ ಸಂಖ್ಯೆ ಎಷ್ಟು?*

ಆ) *ರಾಜ್ಯದಲ್ಲಿ ಕುಸ್ತಿ ಕಲೆಯನ್ನು ಬೆಳೆಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಇ) *ರಾಜ್ಯದಲ್ಲಿ ಕುಸ್ತಿ ಕಲೆಗಳಲ್ಲಿ ನಿವೃತ್ತಿಯನ್ನು ಹೊಂದಿರುವ ಕುಸ್ತಿ ಪಟುಗಳಿಗೆ ನಿವೃತ್ತಿ ಮಾಸಾಶನ ಕೊಡಲು ಸರ್ಕಾರದವರು ಪರಿಶೀಲಿಸುವರೆ?*

ಈ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಕನ್ನಡ, ಸಂಸ್ಕೃತಿ ಹಾಗೂ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿರುವ ಗರಡಿ ಮನೆಗಳ ಸಂಖ್ಯೆ : 267

ಆ) ರಾಜ್ಯದಲ್ಲಿ ಕುಸ್ತಿ ಕಲೆಯನ್ನು ಬೆಳೆಸಲು ರಾಜ್ಯ ನಿರ್ದಿಷ್ಟ ಕ್ರಮಗಳನ್ನು ಹಮ್ಮಿಕೊಂಡಿದೆ. ಜಿಲ್ಲಾ ವಲಯದಲ್ಲಿ ಗ್ರಾಮ ಗರಡಿ ಮನೆ ನಿರ್ಮಾಣ ಮಾಡಲು ಮತ್ತು ರಾಜ್ಯ ವಲಯದಲ್ಲಿ ಕುಸ್ತಿ ಅಖಾಡಾ ನಿರ್ಮಾಣ ಮಾಡಲು ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಪ್ರತಿಭಾವಂತ ಯುವ ಕುಸ್ತಿ ಪಟುಗಳನ್ನು ಗುರುತಿಸಿ ಕ್ರೀಡಾ ನಿಲಯಗಳಲ್ಲಿ ಅವರಿಗೆ ಕುಸ್ತಿ ಕಲೆಯಲ್ಲಿ ಪ್ರಾವೀಣ್ಯತೆ ಪಡೆಯಲು ನುರಿತ ತರಬೇತಿದಾರರಿಂದ ತರಬೇತಿ ನೀಡಲಾಗುತ್ತಿದೆ. ರಾಜ್ಯ, ರಾಷ್ಟ್ರ ಮತ್ತು ಅಂತರ್ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರತಕ್ಕಂತಹ ಕಷ್ಟ ಪರಿಸ್ಥಿತಿಯಲ್ಲಿರುವ ಕುಸ್ತಿ ಪಟುಗಳಿಗೆ ಮಾಸಾಶನ ಮಂಜೂರು ಮಾಡಲಾಗುತ್ತಿದೆ.

ಇ) ಕುಸ್ತಿ ಕಲೆಗಳಲ್ಲಿ ನಿವೃತ್ತಿಯನ್ನು ಹೊಂದಿರುವ ಕುಸ್ತಿ ಪಟುಗಳಿಗೆ ಈಗಾಗಲೆ ಮಾಸಾಶನವನ್ನು ಮಂಜೂರು ಮಾಡಲಾಗುತ್ತಿದೆ.

ಈ) ಪ್ರಸ್ತುತ ಒಟ್ಟು 424 ಜನ ಕುಸ್ತಿ : ಕ್ರೀಡಾಪಟುಗಳು ಮಾಸಾಶನ ಪಡೆಯುತ್ತಿದ್ದಾರೆ.

ರಾಜ್ಯದಲ್ಲಿ ಯುವಕರಿಗಾಗಿ ಸರ್ಕಾರದ ಯೋಜನೆಗಳು

1758- ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಸಂಸ್ಕೃತಿ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯುವಕರಿಗಾಗಿ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳೇನು?

ಆ) ಕಳೆದ 4 ವರ್ಷಗಳಲ್ಲಿ ಸರ್ಕಾರದವರು ಯುವಕರ ಅಭಿವೃದ್ಧಿಗಾಗಿ ಎಷ್ಟೆಷ್ಟು ಹಣ ವಿನಿಯೋಗಿಸಿದೆ?

ಇ) ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ಮತ್ತು ಈ ಯೋಜನೆಗಳು ಫಲಕಾರಿಯಾಗಿದೆ?

ಈ) ರಾಜ್ಯದ ಯುವಕರಿಗೆ ಉದ್ಯೋಗವೃದ್ಧಿಗೆ ಸರ್ಕಾರದ ಯೋಜನೆಗಳೇನು?

ಉ) ಯುವನೀತಿ ಬಗ್ಗೆ ರಾಜ್ಯವು ಕೈಗೊಂಡಿರುವ ಕ್ರಮವೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ, ಸಂಸ್ಕೃತಿ ಹಾಗೂ ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು) :

ಅ) ಯುವಕರಿಗಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.